ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.): ಮಾನ್ಯ ಅಧ್ಯಕ್ಷರೆ, ಈಗೇನು ಶ್ರೀ ಆರ್.ಟಿ. ಪಾಟೀಲ್ ಶ್ರೀ ಹಿರೋಜಿಯವರ ಆತ್ಮಶಾಂತಿಗಾಗಿ ಎಲ್ಲರೂ ಮಾತನಾಡಿದ್ದಾರೆ ನನ್ನಿಂದ ನನ್ನ ಪಕ್ಷದಿಂದ ಅವರ ಕುಟುಂಬವರ್ಗಕ್ಕೆ ಅವರ ಅಗಲಿಕೆಯನ್ನು ಸಹಿಸುವಂತಹ ಶಕ್ತಿಯನ್ನು ದೇವರು ಕೊಡಬೇಕು, ಅವರ ಆತ್ಮಗಳಿಗೆ ಶಾಂತಿ ಸಿಗಬೇಕು. ನಾವು ಹೇಳದಿದ್ದರೂ ಅವರ ಆತ್ಮಗಳು ಶಾಂತವಾಗುತ್ತವೆ, ಹೇಳಿದರೂ ಆಗುತ್ತವೆ. ತೊಂದರೆಯಲ್ಲಿದ್ದು ಅಗಲಿ ಹೋಗಿದ್ದರೆ, ಅಂತಹವರ ಕುಟುಂಬಗಳಿಗೆ ನಾವು ಪರಿಹಾರ ಕೊಡಬೇಕು ಪಕ್ಕದ ರಾಜ್ಯಗಳಲ್ಲೆಲ್ಲ ಹೇಗೆ ಮಾಡಿದ್ದಾರೆಂಬುದನ್ನು ತಾವು ಪತ್ರಿಕೆಗಳಲ್ಲಿ ನೋಡಿರಬಹುದು, ಮನೆ ಇಲ್ಲ ಅಂದರೆ ಮನೆ ಕೊಡುವುದು, ಬಡತನದಲ್ಲಿದ್ದರೆ ಅವರಿಗೆ ಸಹಾಯ ಮಾಡುವುದು, ಮುಖ್ಯಮಂತ್ರಿಗಳಿಂದ ನೇರವಾಗಿ ಹೋಗುತ್ತದೆ. ಇಂಥವರಿಗೆ ಮನೇನೇ ಇರಲಿಲ್ಲ ಪಾಪ ಅವರ ಹೆಂಡತಿಗೆ ಮನೆ ಕೊಟ್ಟಿದ್ದಾರೆ. ಹೀಗೆಲ್ಲಾ ಡೈರೆಕ್ಟಾಗಿ ಮಾಡುತ್ತಿದ್ದಾರೆ. ಇದನ್ನೇ ದೊಡ್ಡ ಚರ್ಚೆ ಮಾಡಿ, ಅದರಿಂದ ಶಾಸಕರಿಗೆ ಅವರ ಆತ್ಮಗಳಿಗೆ ಶಾಂತಿಯಾಗುವುದಿಲ್ಲ. ಹೇಳಿದ ತಕ್ಷಣ ಮಾಡಬೇಕು. ಅದೇ, ಈಗಿರುವ ಆತ್ಮಗಳಿಗೆಲ್ಲ ಸಂತೋಷ. ಫಸ್ಟು ನಾವು ಸಂತೋಷವಾಗಿದ್ದು ಹೋಗಿರುವವರ ಆತ್ಮಶಾಂತಿಗಾಗಿ ಮಾತನಾಡಬೇಕು. ಮಾನ್ಯ ವಾಟಾಳ್ ನಾಗರಾಜರು ಹೇಳಿದರು, ಕೆಲವು ಎಂಎಲ್ಎಗಳಿಗೆ ಪ್ಲಾಟ್‌ಫಾರ್ಮ್ ಇಲ್ಲ, ಅಂತಹ ಸ್ಥಿತಿಯಲ್ಲಿದ್ದಾರೆ. ಇದನ್ನು ದೊಡ್ಡ ಚರ್ಚೆ ಮಾಡುವ ಬದಲು You must implement first, do that. ಪಾಪ ಹೋಗಿರುವವರಿಗೆಲ್ಲಾ ಅವರ ಆತ್ಮಕ್ಕೆ ಶಾಂತಿ ಸಿಗಲಿ ಅಂತ ಸುಮಾರು ಸಲ ಓಂಶಕ್ತಿ ಓಂಶಕ್ತಿ ಅನ್ನುವ ತರಹ ಶಾಂತಿಗಳು. ಅದನ್ನು ಪರಿಹಾರ ಮಾಡಬೇಕು, ತಾವು You must take very importance. Next time, ಆ ತರಹ ಯಾರಿಗಾದರೂ ಆತ್ಮಶಾಂತಿಯಾಗಬೇಕಾದರೆ ಮಾತನಾಡುವ ಟೈಮಿನಲ್ಲಿ ಇಂಥವರಿಗೆ ಇಂತಹ ಪರಿಹಾರ ಮಾಡಿದ್ದೇವೆ ಎಂದೂ ಸೇರಿಸಿ ಮಾತನಾಡಿದರೆ ಈ ಸಭೆಗೆ ಒಳ್ಳೆಯದು, ಸತ್ತವರ ಆತ್ಮಗಳಿಗೆ ಶಾಂತಿ ಸಿಗುತ್ತದೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಅಧ್ಯಕ್ಷರು: ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಒಂದು ನಿಮಿಷ ಎದ್ದುನಿಂತು ಮೌನ ಆಚರಿಸಬೇಕು ಎಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಿತು)

2. ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ದಿನಾಂಕ 31–3–2005ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಭಾರತ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ ದಿನಾಂಕ 31–3–2005ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.